## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 713 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23/12/2022 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕರಿಗಾಗಿ ಇರುವ ಯೋಜನೆ ಮತ್ತು ಸೌಲಭ್ಯಗಳೇನು: ಪ್ರಸ್ತುತ ರಾಜ್ಯದಲ್ಲಿರುವ ಕಾರ್ಮಿಕರೆಷ್ಟು: (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ಒದಗಿಸುವುದು) | ಕಾರ್ಮಿಕ ಇಲಾಖೆಯು ವಿವಿಧ ಕಾರ್ಮಿಕ ಕಾಯ್ದೆಗಳಡಿ ಕಾರ್ಮಿಕರಿಗೆ ಶಾಸನಾತ್ಮಕ ಸೌಲಭ್ಯಗಳನ್ನು ಒದಗಿಸಬಹುದಾಗಿರುತ್ತದೆ. ಅಲ್ಲದೇ, ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡಳಿಗಳು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಅರ್ಹ ಕಾರ್ಮಿಕರಿಗೆ ಒದಗಿಸಲಾಗುತ್ತಿದೆ.<br><br>ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದರೆ, ಇಲಾಖೆಯ ಹಾಗೂ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೊಂದಾಯಿತರಾದ ಹಾಗೂ ವಿವಿಧ ಕಾರ್ಮಿಕ ಕಾಯ್ದೆಗಳಡಿ ನೊಂದಾಯಿಸಿರುವ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು, ವಿವರ ಈ ಕೆಳಕಂಡಂತಿದೆ:<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br><br>ಈ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಭಿತರಿಗಾಗಿ ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ. ವಿವರವನ್ನು **ಅನುಬಂಧ-01** ರಲ್ಲಿ ಒದಗಿಸಲಾಗಿದೆ.<br><br>ಪ್ರಸ್ತುತ ರಾಜ್ಯದಲ್ಲಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕುರಿತು ಮಂಡಳಿಯ ವತಿಯಿಂದ ಸಮೀಕ್ಷೆ ಕೈಗೊಂಡಿರುವುದಿಲ್ಲ. ಮಂಡಳಿಯ ಫಲಾನುಭವಿಗಳಾಗಿ ಇದುವರೆಗೂ **30.43** ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ನೋಂದಣಿಯಾದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-02** ರಲ್ಲಿ ಒದಗಿಸಲಾಗಿದೆ. |

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

ಈ ಮಂಡಳಿ ವತಿಯಿಂದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:–** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಸಂಬಂಧಪಟ್ಟಂತೆ ಈ ಯೋಜನೆಯಡಿ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಅ) **ಅಪಘಾತ ಪರಿಹಾರ ಸೌಲಭ್ಯ :** ಈ ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ಸೌಲಭ್ಯ ನೀಡಲಾಗುತ್ತಿದೆ.

(ಆ) **ಶೈಕ್ಷಣಿಕ ಧನ ಸಹಾಯ :** ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/–ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:–**

ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್/ಗುರುತಿನ ಚೀಟಿ ವಿತರಿಸಲಾಗುತ್ತಿದ್ದು, ಪ್ರಸ್ತುತ ಯಾವುದೇ ಆರ್ಥಿಕ ಸೌಲಭ್ಯ ಒದಗಿಸುತ್ತಿಲ್ಲ.

ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ, ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು

| | | |
|---|---|---|
| | | ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳು / ಕೋವಿಡ್-19ರ ವಿಶೇಷ ಪ್ಯಾಕೇಜ್‌ನಡಿ ಹಾಗೂ ಅಸಂಘಟಿತ ಕಾರ್ಮಿಕರ ದತ್ತಾಂಶ ಸಂಗ್ರಹಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿಸುವ ಕಾರ್ಯಕ್ರಮಕೈಗೊಂಡಿದ್ದು, ಸದರಿ ಪೋರ್ಟಲ್‌ನಲ್ಲಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಸಂಖ್ಯೆಯು ಲಭ್ಯವಿದ್ದು, ಜಿಲ್ಲಾವಾರು ಹಾಗೂ ಯೋಜನಾವಾರು ಅಂಕಿ ಅಂಶವನ್ನು <u>ಅನುಬಂಧ-03</u> ರಲ್ಲಿ ಒದಗಿಸಿದೆ.<br><br>**<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:</u>**<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ 20:40 ರ ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ಒಟ್ಟು ರೂ.60/- ಗಳ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಕೆಳಕಂಡ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು.<br><br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ<br>4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ<br><br>2021-22ನೇ ಸಾಲಿನಲ್ಲಿ ಮಂಡಳಿಗೆ ವಂತಿಗೆ ಪಾವತಿಸಿರುವ ಒಟ್ಟು 44.32 ಲಕ್ಷ ಸಂಘಟಿತ ಕಾರ್ಮಿಕರಿದ್ದು, ಜಿಲ್ಲಾವಾರು ವಿವರಗಳನ್ನು **<u>ಅನುಬಂಧ-04</u>** ರಲ್ಲಿ ನೀಡಲಾಗಿದೆ.<br><br>ಕಾರ್ಮಿಕ ಇಲಾಖೆಯ ವತಿಯಿಂದ ಕಾರ್ಮಿಕರ ಸಂಖ್ಯೆಗಳ ಬಗ್ಗೆ ಯಾವುದೇ ಅಧ್ಯಯನ ಅಥವಾ ಸಮೀಕ್ಷೆ ನಡೆಸಿರುವುದಿಲ್ಲ. ಆದರೆ, ಕಾರ್ಮಿಕ ಇಲಾಖೆಯು ಹಲವಾರು ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನ ಮಾಡುತ್ತಿದ್ದು, ಕೆಲವು ಕಾಯ್ದೆಗಳಡಿ ಮಾಲೀಕರು ಪರವಾನಗಿ/ನೋಂದಣಿ ಇಲಾಖಾ ವತಿಯಿಂದ ಪಡೆಯುವ ಸಂದರ್ಭದಲ್ಲಿ ನೀಡಿರುವ ಮಾಹಿತಿ ಆಧಾರದ ಮೇಲೆ ಅಂಗಡಿ ವಾಣಿಜ್ಯ ಸಂಸ್ಥೆ, ಕಾರ್ಖಾನೆ ಕಾಯ್ದೆ ಮತ್ತು ತೋಟ ಕಾರ್ಮಿಕರ ಕಾಯ್ದೆಯಡಿ ನೀಡಿರುವ ಮಾಹಿತಿಯನ್ನು <u>ಅನುಬಂಧ-05</u> ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಅ) | ಕಾರ್ಮಿಕರಿಗೆ ಕಾರ್ಡ್ ನೀಡಲು ಇರುವ ಮಾನದಂಡಗಳೇನು: ರಾಜ್ಯದಲ್ಲಿ ಕಾರ್ಡ್ ಹೊಂದಿರುವವರೆಷ್ಟು: (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ಒದಗಿಸುವುದು) | ವಿವಿಧ ಮಂಡಳಿಗಳಲ್ಲಿ ಕಾರ್ಮಿಕರಿಗೆ ಕಾರ್ಡ್ ನೀಡಲು ಇರುವ ಮಾನದಂಡಗಳ ವಿವರ ಈ ಕೆಳಗಿನಂತಿದೆ:<br><br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>**<br><br>ಈ ಮಂಡಳಿಯಲ್ಲಿ ಫಲಾನುಭವಿಗಳಾಗಿ ನೋಂದಣಿಯಾಗಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಯ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಮತ್ತು 18-60ರ ವಯೋಮಾನದ ಕಾರ್ಮಿಕರು ಅರ್ಹರಿರುತ್ತಾರೆ.<br><br>**ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:**<br><br>ಎ) ನಮೂನೆ-5ರಲ್ಲಿ ಅರ್ಜಿ<br>ಬಿ) ಮಾಲೀಕರ ಪ್ರಮಾಣ ಪತ್ರ: ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್‌ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ-V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ-V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ-V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'.<br>ಸಿ) ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು<br>ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ |

ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ ಇಎಸ್‌ಐ ಆಸ್ಪತ್ರೆ/ ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ.

**ನೋಂದಣಿ ಮಾಡುವ ಕಛೇರಿಗಳು:**

ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು.

ಈ ಮೇಲೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಸೇವಾ ಸಿಂಧು ತಂತ್ರಾಂಶದಲ್ಲಿ ಸಂಬಂಧಪಟ್ಟ ಕಾರ್ಯ ವ್ಯಾಪಿಯ ಕಛೇರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಮಂಡಳಿಯ ಫಲಾನುಭವಿಗಳಾಗಿ ಇದುವರೆಗೂ 30.43 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ನೋಂದಣಿಯಾದ ಎಲ್ಲಾ ಫಲಾನುಭವಿಗಳಿಗೆ ಅನ್‌ಲೈನ್ ಮುಖೇನ ಗುರುತಿನಚೀಟಿಯನ್ನು ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು <u>**ಅನುಬಂಧ-02**</u> ರಲ್ಲಿ ಲಗತ್ತಿಸಿದೆ.

<u>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**</u>

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್‌ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು. ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿಕಾರ್ಮಿಕರು ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿಯನ್ನು ವಿತರಿಸಲಾಗುತ್ತಿದೆ. ಇದಲ್ಲದೆ ಅಸಂಘಟಿತ ಕಾರ್ಮಿಕರನ್ನು ದತ್ತಾಂಶವನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಇ-ಶ್ರಮ್ ಪೋರ್ಟಲ್‌ಅನ್ನು ಅಭಿವೃದ್ಧಿ ಪಡಿಸಿದ್ದು ಸದರಿ ಪೋರ್ಟಲ್‌ನಲ್ಲಿ 379 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ ಸ್ಥಳದಲ್ಲೆ ಗುರುತಿನ ಚೀಟಿ ವಿತರಿಸಲಾಗುತ್ತಿದೆ.

<u>(1) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>

ಈ ಯೋಜನೆಯಡಿ ಪ್ರಸ್ತುತ ಆನ್‌ಲೈನ್ ಮುಖಾಂತರ ಉಚಿತವಾಗಿ ನೋಂದಾಯಿಸಲಾಗುತ್ತಿದ್ದು, ನೋಂದಣಿಯ ಮಾನದಂಡಗಳು ಈ ಕೆಳಗಿನಂತಿವೆ.

| | | |
|---|---|---|
| | | **ಮಾನದಂಡ:-**<br>• ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.<br>• ವಯೋಮಿತಿ 18ರಿಂದ60 ವರ್ಷಗಳು..<br>• ಪ್ರಸ್ತುತ ಮೇಲ್ಕಂಡ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯ.<br>• ಯೋಜನೆಯಡಿ ನೋಂದಣಿಯಾಗಲು ಅರ್ಜಿದಾರರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ2008ರ ಅನುಸೂಚಿIIರಲ್ಲಿ ನಮೂದಿಸಿರುವ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿರಬಾರದು.<br>**(2) ಕೇಂದ್ರ ಸರ್ಕಾರದ ಇ-ಶ್ರಮ್ ಯೋಜನೆಯಡಿ ಅಸಂಘಟಿತ ಕಾರ್ಮಿಕರ ನೋಂದಣಿ:-**<br>**ಮಾನದಂಡಗಳು:-**<br>• ಕೇಂದ್ರ ಸರ್ಕಾರವು ಗುರುತಿಸಿದ 379 ಅಸಂಘಟಿತ ವರ್ಗದ ಕಾರ್ಮಿಕರ ಪಟ್ಟಿಯಲ್ಲಿ ಸೇರಿರಬೇಕು.<br>• 16 ರಿಂದ 59 ವರ್ಷ ವಯೋಮಾನ.<br>• ಆದಾಯತೆರಿಗೆ ಪಾವತಿದಾರರಾಗಿರಬಾರದು.<br>• ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು.<br>ಕೇಂದ್ರ ಸರ್ಕಾರದ ಇ-ಶ್ರಮ್ ಯೋಜನೆ ಹಾಗೂ ರಾಜ್ಯ ಸರ್ಕಾರದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಗಳಡಿ ಗುರುತಿನ ಚೀಟಿ ವಿತರಿಸಲಾಗಿದ್ದು ಜಿಲ್ಲಾವಾರು ಕಾರ್ಮಿಕರ ಅಂಕಿ-ಅಂಶಗಳನ್ನು ಸಹಾ ಲಗತ್ತಿಸಿರುವ <u>ಅನುಬಂಧ-3</u> ರಲ್ಲಿ ಒದಗಿಸಿದೆ. |
| ಇ) | ಕಾರ್ಮಿಕರ ಕಾರ್ಡ್‌ಗಳು ಅಕ್ರಮವಾಗಿ ವಿತರಣೆಯಾಗದಂತೆ ತಡೆಯಲು ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳೇನು? | **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ವಿವಿಧ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ಮಾತ್ರ ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸುವ ನಿಟ್ಟಿನಲ್ಲಿ,<br>• ಸ್ವತಃ ಅರ್ಜಿದಾರರೇ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೇವಾ ಸಿಂಧು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.<br>• ಮಾಹಿತಿ ಶಿಕ್ಷಣ ಸಂವಹನ (ಐಇಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ |

| | | |
|---|---|---|
| | | ಮಂಡಳಿಯ ನೋಂದಣಿ ಹಾಗೂ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವುದರೊಂದಿಗೆ ಅನರ್ಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.<br>ನೋಂದಣಿಯಾಗಿರುವ ಅರ್ಜಿಗಳಲ್ಲಿ ಅನರ್ಹ ಅರ್ಜಿಗಳು ನೋಂದಣಿಯಾಗಿರುವುದು ಕಂಡುಬಂದಲ್ಲಿ ಅವರ ಅರ್ಜಿಯನ್ನು ಕೂಡಲೇ ರದ್ದುಪಡಿಸಲಾಗುತ್ತಿದೆ.<br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಮಂಡಳಿಯ ಯೋಜನೆಗಳಡಿ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ನೀಡಲು, ನಿಗಧಿಪಡಿಸಿದ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು, ಯಾವುದೇ ರೀತಿಯ ಅಕ್ರಮಗಳಿಗೆ ಅವಕಾಶವಿರುವುದಿಲ್ಲ. |

ಕಾಇ 706 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

## ಅನುಬಂಧ–01

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:713

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ 25 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:

1. **ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ** ಮಾಸಿಕ **ರೂ.3,000/–**
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ **ರೂ.1500/–**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/–** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/–** ದವರೆಗೆ ಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ
5. **ಟ್ರೈನಿಂಗ್–ಕಮ್–ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/– ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/–** ದವರೆಗೆ ಮುಂಗಡಸಾಲ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ **ರೂ.50,000/–**
9. **ಶಿಶು ಪಾಲನಾ ಸೌಲಭ್ಯ: ಕಾರ್ಮಿಕರ ಮಕ್ಕಳ ಪಾಲನೆಗಾಗಿ ರಾಜ್ಯದದ್ಯಾಂತ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.**
10. **ಅಂತ್ಯಕ್ರಿಯೆ ವೆಚ್ಚ : ರೂ.4,000/–** ಹಾಗೂ ಅನುಗ್ರಹ ರಾಶಿ **ರೂ.71,000/–**ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

| ಕ್ರ.ಸಂ | ತರಗತಿ (ಉತ್ತೀರ್ಣಕ್ಕೆ) | |
|---|---|---|
| 1 | ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5) | **5,000** |
| 2 | 1 ರಿಂದ 4ನೇ ತರಗತಿ | **5,000** |
| 3 | 5 ರಿಂದ 8ನೇ ತರಗತಿ | **8,000** |
| 4 | 9 ಹಾಗೂ 10ನೇ ತರಗತಿ | **12,000** |
| | ಪದವಿ ಪೂರ್ವ | |
| 5 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | **15,000** |
| 6 | ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ | **20,000** |
| 7 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್ | **40,000** |
| 8 | ಡಿ.ಎಡ್ | **25,000** |
| | ಬಿ.ಎಡ್ | **35,000** |

| | | |
|---|---|---|
| 9 | ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ) | 25,000 |
| 10 | ಎಲ್ಎಲ್‌ಬಿ / ಎಲ್ಎಲ್ಎಮ್ | 30,000 |
| 11 | ಸ್ನಾತಕೋತ್ತರ ಪದವಿ ಸೇರ್ಪಡೆಗೆ | 35,000 ಗರಿಷ್ಠ<br>2 ವರ್ಷಅವಧಿಗೆ ಒಳಪಟ್ಟು |
| | **ತಾಂತ್ರೀಕ/ ವೈಧ್ಯಕೀಯ ಎನ್‌ಇಇಟಿ ಅಥವಾ ಕೆಸಿಇಟಿ** | |
| 12 | ಬಿಇ / ಬಿ.ಟೆಕ್‌ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | ಸದರಿ<br>ಕೋರ್ಸ್‌ನ ಗರಿಷ್ಠ<br>2 ವರ್ಷ ಅವಧಿಗೆ ಒಳಪಟ್ಟು<br>ವಾರ್ಷಿಕ ರೂ.50,000 |
| 13 | ಎಮ್.ಟೆಕ್/ ಎಮ್ ಇ ( ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರಕೋರ್ಸ್) | ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು<br>ವಾರ್ಷಿಕ ರೂ. 60,000 |
| 14 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ಎಸ್ / ಬಿಡಿಎಸ್ /ಬಿಹೆಚ್ಎಮ್ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್ | ರೂ.60,000<br>(ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು ) |
| | ಎಮ್‌ಡಿ | ರೂ. 75,000 (ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು) |
| 15 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | ಪಿಹೆಚ್‌ಡಿಗೆ ಗರಿಷ್ಠ<br>ಮೂರು ವರ್ಷಗಳಿಗೆ ಹಾಗೂ<br>ಎಮ್‌ಫಿಲ್‌ಗೆ 1 ವರ್ಷಕ್ಕೆ<br>ಪ್ರತಿ ವರ್ಷ<br>ರೂ. 25,000 (ಯೂಜಿಸಿಯ<br>ಜೂನಿಯರ್ ರಿಸರ್ಚ್ ಫೆಲೋಶಿಫ್‌ಗೆ<br>ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ<br>ಮತ್ತು<br>ರಾಜ್ಯ ಸರ್ಕಾರದಲ್ಲಿ ಕೆಲಸ<br>ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ<br>ಯೂಜಿಸಿ ನಿಯಮಗಳನ್ವಯ ವೇತನ<br>ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ<br>ಅನುದಾನಿತ<br>ಕಾಲೇಜುಗಳಲ್ಲಿ ಕೆಲಸ<br>ನಿರ್ವಹಿಸುತ್ತಿರುವ ಅಭ್ಯರ್ಥಿಗಳು<br>ಈ ಸೌಲಭ್ಯವನ್ನು ಪಡೆಯಲು<br>ಅರ್ಹರಿರುವುದಿಲ್ಲ. |
| 16 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್ಎಸ್ /ಎನ್ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು | ಪಾವತಿಸಿದ ಬೋದನಾ ಶುಲ್ಕ |

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ.300/-** ರಿಂದ **ರೂ.20,000/-ವರೆಗೆ**
13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/-** **ಮತ್ತುಭಾಗಶಃ** ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ **ರೂ.60,000/-**
16. **ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪಾರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠೀತ ಸಂಸ್ಥೆಗಳಿಂದ ತರಬೇತಿ .ಮತ್ತುಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲುತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ನೋಂದಾಯಿತ ಫಲಾನುಭವಿಗಳಿಗೆ **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ**
19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.**6,000/-** ಗಳ ಸಹಾಯಧನ.
20. ಇಮ್ಯೂನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ
22. ಮೋಬೈಲ್ ಮೆಡಿಕಲ್‌ಕೇರ್‌ಯೂನಿಟ್
23. ಪೈಲಟ್‌ಟ್ರೈನಿಂಗ್: ಫಲಾನುಭವಿಯಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಶನ್‌ಕಿಟ್ಸ್

## ಅನುಬಂಧ-02

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:713ಕ್ಕೆ**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿ ಗುರುತಿನಚೀಟಿ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | ಒಟ್ಟು ನೋಂದಣಿಯಾದ ಫಲಾನುಭವಿಗಳ ಸಂಖ್ಯೆ. |
|---|---|---|
| 1 | ಬಾಗಲಕೋಟೆ | 110813 |
| 2 | ಬೆಂಗಳೂರು ಗ್ರಾಮಾಂತರ | 17379 |
| 3 | ಬೆಂಗಳೂರು ನಗರ | 306889 |
| 4 | ಬೆಳಗಾವಿ | 166316 |
| 5 | ಬಳ್ಳಾರಿ | 81689 |
| 6 | ಬೀದರ | 187950 |
| 7 | ವಿಜಯಪುರ | 96543 |
| 8 | ಚಾಮರಾಜನಗರ | 43622 |
| 9 | ಚಿಕ್ಕಬಳ್ಳಾಪುರ | 38769 |
| 10 | ಚಿಕ್ಕಮಗಳೂರು | 80894 |
| 11 | ಚಿತ್ರದುರ್ಗ | 98880 |
| 12 | ದಕ್ಷಿಣ ಕನ್ನಡ | 68069 |
| 13 | ದಾವಣಗೆರೆ | 113448 |
| 14 | ಧಾರವಾಡ | 118837 |
| 15 | ಗದಗ | 72724 |
| 16 | ಕಲಬುರಗಿ | 259796 |
| 17 | ಹಾಸನ | 66722 |
| 18 | ಹಾವೇರಿ | 196288 |
| 19 | ಕೊಡಗು | 6143 |
| 20 | ಕೋಲಾರ | 79434 |
| 21 | ಕೊಪ್ಪಳ | 156987 |
| 22 | ಮಂಡ್ಯ | 26910 |
| 23 | ಮೈಸೂರು | 106640 |
| 24 | ರಾಯಚೂರು | 56716 |
| 25 | ರಾಮನಗರ | 40067 |
| 26 | ಶಿವಮೊಗ್ಗ | 91424 |
| 27 | ತುಮಕೂರು | 81223 |
| 28 | ಉಡುಪಿ | 51355 |
| 29 | ಉತ್ತರಕನ್ನಡ | 114693 |
| 30 | ಯಾದಗಿರಿ | 106641 |
| | ಒಟ್ಟು | **30,43,861** |

# ಅನುಬಂಧ-03

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನ ಸಭೆಯಿಂದ ಚುನಾಯಿತರಾದವರು)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:713ಕ್ಕೆ

ಜಿಲ್ಲಾವಾರು ಕಾರ್ಮಿಕರ ಅಂಕಿ-ಅಂಶಗಳ ವಿವರ

| ಕ್ರ.ಸಂ. | ಜಿಲ್ಲೆ | ಇ-ಶ್ರಮ್ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ | ಕೋವಿಡ್-19 ರಲ್ಲಿ ಅರ್ಜಿಸಲ್ಲಿಸಿರುವ ಕಾರ್ಮಿಕರ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ಬಾಗಲಕೋಟೆ | 223326 | 9470 | 38124 |
| 2 | ಬಳ್ಳಾರಿ | 385839 | 14672 | 73260 |
| 3 | ಬೆಳಗಾವಿ | 654897 | 12270 | 151032 |
| 4 | ಬೆಂಗಳೂರು ಗ್ರಾಮಾಂತರ | 149662 | 1231 | 17525 |
| 5 | ಬೆಂಗಳೂರು ನಗರ | 315769 | 22179 | 147631 |
| 6 | ಬೀದರ | 261724 | 3281 | 56827 |
| 7 | ಚಾಮರಾಜನಗರ | 184045 | 3905 | 30439 |
| 8 | ಚಿಕ್ಕಬಳ್ಳಾಪುರ | 187477 | 3031 | 32634 |
| 9 | ಚಿಕ್ಕಮಗಳೂರು | 151357 | 2826 | 20418 |
| 10 | ಚಿತ್ರದುರ್ಗ | 234617 | 5484 | 37392 |
| 11 | ದಕ್ಷಿಣ ಕನ್ನಡ | 218632 | 5884 | 31663 |
| 12 | ದಾವಣಗೆರೆ | 241376 | 10427 | 38446 |
| 13 | ಧಾರವಾಡ | 249818 | 4835 | 58486 |
| 14 | ಗದಗ | 151486 | 4146 | 30634 |
| 15 | ಹಾಸನ | 231579 | 4048 | 18587 |
| 16 | ಹಾವೇರಿ | 292021 | 5228 | 44151 |
| 17 | ಕಲಬುರಗಿ | 355625 | 3957 | 123276 |
| 18 | ಕೊಡಗು | 45989 | 2966 | 3792 |
| 19 | ಕೋಲಾರ | 206490 | 1501 | 38967 |
| 20 | ಕೊಪ್ಪಳ | 179765 | 4664 | 46550 |
| 21 | ಮಂಡ್ಯ | 252894 | 5085 | 45058 |
| 22 | ಮೈಸೂರು | 359903 | 7784 | 102344 |
| 23 | ರಾಯಚೂರು | 205702 | 6473 | 48597 |
| 24 | ರಾಮನಗರ | 139026 | 2260 | 17213 |
| 25 | ಶಿವಮೊಗ್ಗ | 269350 | 6376 | 30324 |
| 26 | ತುಮಕೂರು | 325572 | 10969 | 54899 |
| 27 | ಉಡುಪಿ | 181982 | 4517 | 12313 |
| 28 | ಉತ್ತರಕನ್ನಡ | 236649 | 38664 | 40202 |
| 29 | ವಿಜಯನಗರ | 21517 | - | - |
| 30 | ವಿಜಯಪುರ | 203582 | 2348 | 34103 |
| 31 | ಯಾದಗಿರಿ | 139578 | 2349 | 28056 |
| | ಒಟ್ಟು | **7257249** | **213427** | **1452943** |

## ಅನುಬಂಧ-04

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:713ಕ್ಕೆ

2021-22ನೇ ಸಾಲಿನಲ್ಲಿ ಸಂಘಟಿತ ಕಾರ್ಮಿಕರು ಮಂಡಳಿಗೆ ವಂತಿಗೆ ಪಾವತಿಸಿರುವ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಜಿಲ್ಲೆ | ಒಟ್ಟು ನೌಕರರ ಸಂಖ್ಯೆ |
|---|---|---|
| 1 | ಬಾಗಲಕೋಟೆ | 11081 |
| 2 | ಬಳ್ಳಾರಿ | 49603 |
| 3 | ಬೆಳಗಾವಿ | 30822 |
| 4 | ಬೆಂಗಳೂರು ಗ್ರಾಮಾಂತರ | 3853549 |
| 5 | ಬೆಂಗಳೂರು ನಗರ | 87942 |
| 6 | ಬೀದರ | 3164 |
| 7 | ಚಾಮರಾಜನಗರ | 2242 |
| 8 | ಚಿಕ್ಕಬಳ್ಳಾಪುರ | 5286 |
| 9 | ಚಿಕ್ಕಮಗಳೂರು | 6357 |
| 10 | ಚಿತ್ರದುರ್ಗ | 5653 |
| 11 | ದಕ್ಷಿಣ ಕನ್ನಡ | 38147 |
| 12 | ದಾವಣಗೆರೆ | 9912 |
| 13 | ಧಾರವಾಡ | 31797 |
| 14 | ಗದಗ | 3649 |
| 15 | ಹಾಸನ | 12786 |
| 16 | ಹಾವೇರಿ | 5419 |
| 17 | ಕಲಬುರಗಿ | 12216 |
| 18 | ಕೊಡಗು | 9865 |
| 19 | ಕೋಲಾರ | 20838 |
| 20 | ಕೊಪ್ಪಳ | 5200 |
| 21 | ಮಂಡ್ಯ | 17871 |
| 22 | ಮೈಸೂರು | 94801 |
| 23 | ರಾಯಚೂರು | 3527 |
| 24 | ರಾಮನಗರ | 24655 |
| 25 | ಶಿವಮೊಗ್ಗ | 25391 |
| 26 | ತುಮಕೂರು | 25274 |
| 27 | ಉಡುಪಿ | 16554 |
| 28 | ಉತ್ತರಕನ್ನಡ | 8668 |
| 29 | ವಿಜಯನಗರ | 9144 |
| 30 | ವಿಜಯಪುರ | 1135 |
| | ಒಟ್ಟು | 44,32,548 |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:713ಕ್ಕೆ

ಅನುಬಂಧ-05

ಕಾರ್ಮಿಕ ಇಲಾಖೆಯಲ್ಲಿ ವಿವಿಧ ಕಾರ್ಮಿಕ ಕಾಯ್ದೆಗಳಡಿ ನೊಂದಣಿಯಾಗಿರುವ ಕಾರ್ಮಿಕರ ವಿವರ

| ಕ್ರ.ಸಂ. | ಜಿಲ್ಲೆಯ ಹೆಸರು | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ | ಕಾರ್ಖಾನೆಗಳ ಕಾಯ್ದೆ | ತೋಟ ಕಾರ್ಮಿಕ ಕಾಯ್ದೆ | ಬೀಡಿ ಮತ್ತು ಸಿಗಾರ್ ಕಾಯ್ದೆ |
|---|---|---|---|---|---|
| 1 | ಬೆಂಗಳೂರು ನಗರ | 4198376 | 803600 | - | 15 |
| 2 | ರಾಮನಗರ | 31658 | 67171 | - | 510 |
| 3 | ತುಮಕೂರು | 52668 | 48523 | - | 2060 |
| 4 | ಚಿಕ್ಕಬಳ್ಳಾಪುರ | 14127 | 16104 | - | 0 |
| 5 | ಕೋಲಾರ | 42155 | 74717 | - | 63 |
| 6 | ಚಾಮರಾಜನಗರ | 7768 | 2757 | - | 1347 |
| 7 | ಮಂಡ್ಯ | 18688 | 20443 | - | 30 |
| 8 | ಮೈಸೂರು | 157461 | 86852 | - | 217 |
| 9 | ವಿಜಯಪುರ | 4837 | 9975 | - | 0 |
| 10 | ಬೆಳಗಾವಿ | 67809 | 70884 | - | 148 |
| 11 | ಬಾಗಲಕೋಟೆ | 26112 | 17077 | - | 0 |
| 12 | ಗದಗ | 10611 | 4922 | - | 0 |
| 13 | ಧಾರವಾಡ | 73423 | 55782 | - | 1427 |
| 14 | ಹಾವೇರಿ | 16188 | 10114 | - | 0 |
| 15 | ಉತ್ತರ ಕನ್ನಡ | 21379 | 16854 | - | 0 |
| 16 | ಬಳ್ಳಾರಿ | 47713 | 60702 | - | 0 |

| | | | | | |
|---|---|---|---|---|---|
| 17 | ಚಿತ್ರದುರ್ಗ | 19462 | 9867 | - | 0 |
| 18 | ದಾವಣಗೆರೆ | 39908 | 10097 | - | 3999 |
| 19 | ಬೀದರ್ | 13942 | 9557 | - | 0 |
| 20 | ಕಲ್ಬುರ್ಗಿ | 28175 | 19161 | - | 0 |
| 21 | ಕೊಪ್ಪಳ | 12672 | 16683 | - | 0 |
| 22 | ರಾಯಚೂರು | 21135 | 16281 | - | 0 |
| 23 | ಯಾದಗಿರಿ | 1990 | 2308 | - | 100 |
| 24 | ಚಿಕ್ಕಮಗಳೂರು | 13905 | 4175 | 14089 | 0 |
| 25 | ಹಾಸನ | 26634 | 25946 | 3205 | 0 |
| 26 | ಕೊಡಗು | 8393 | 2855 | 12784 | 0 |
| 27 | ದಕ್ಷಿಣ ಕನ್ನಡ | 83428 | 49634 | 1059 | 191143 |
| 28 | ಶಿವಮೊಗ್ಗ | 39364 | 28109 | - | 974 |
| 29 | ಉಡುಪಿ | 32357 | 40395 | - | 38466 |
| 30 | ಬೆಂಗಳೂರು ಗ್ರಾಮಾಂತರ | 95823 | 126174 | - | 0 |
| | ಒಟ್ಟು | **5228161** | **1727714** | **31137** | **240499** |